


بسم اللهِ الرّحمٰن الرّحيم

# ತಬೂಕ್ ಯುದ್ಧ: ಕಪಟವಿಶ್ವಾಸಿಗಳ ಪಿತೂರಿ ಮತ್ತು ದೈವಿಕ ರಕ್ಷಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **28–11–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ತಬೂಕ್ ಪ್ರಯಾಣದ ಕುರಿತು ಲಭ್ಯವಿರುವ ಹೆಚ್ಚಿನ ವಿವರಗಳನ್ನು ಇಂದು ನಾನು ವಿವರಿಸುತ್ತೇನೆ. ಹಿಂದಿನ ಖುತ್ಬಗಳಲ್ಲಿ ವಿವರಿಸಿದಂತೆ, ಕೆಲವು ಕಪಟವಿಶ್ವಾಸಿಗಳು ವಿವಿಧ ನೆಪಗಳನ್ನು ಹೇಳಿ ಯುದ್ಧಕ್ಕೆ ಹೋಗಲು ನಿರಾಕರಿಸಿದ್ದರು. ಆದರೆ ಮದೀನಕ್ಕೆ ಹಿಂದಿರುಗಿದ ನಂತರವೂ, ಕಪಟವಿಶ್ವಾಸಿಗಳು ಮುಸ್ಲಿಮರ ಜೊತೆ ಹೋಗದಿರುವುದಕ್ಕೆ ನೆಪಗಳು ಮತ್ತು ಸಬೂಬುಗಳನ್ನು ಹೇಳಿದ್ದು ಕಂಡುಬರುತ್ತದೆ. ಪವಿತ್ರ ಖುರ್‌ಆನಿನಲ್ಲಿಯೂ ಇದರ ಉಲ್ಲೇಖವಿದೆ.

ಪ್ರಯಾಣದಿಂದ ಮದೀನಕ್ಕೆ ಹಿಂದಿರುಗುವಾಗ ಮೊದಲು ಮಸೀದಿಗೆ ಹೋಗಿ ಎರಡು ರಕಅತ್ ನಮಾಝ್ ಸಲ್ಲಿಸುವುದು ಹಝ್ರತ್ ಪೈಗಂಬರ್(ಸ)ರ ರೂಢಿಯಾಗಿತ್ತು. ಅದರಂತೆ, ನಫಲ್ ನಮಾಝನ್ನು ಅನುಷ್ಠಿಸಿದ ನಂತರ ಹಝ್ರತ್ ಪೈಗಂಬರ್(ಸ) ಮಸೀದಿಯಲ್ಲಿಯೇ ಕುಳಿತುಕೊಂಡರು. ಜನರು ಹಝ್ರತ್ ಪೈಗಂಬರ್(ಸ)ರನ್ನು ಭೇಟಿಯಾಗಲು ಬರಲಾರಂಭಿಸಿದರು. ಅದೇ ರೀತಿ, ತಮ್ಮ ಈಮಾನಿನ ದುರ್ಬಲತೆಯಿಂದ ಅಥವಾ ಕಪಟತನದಿಂದ ಯುದ್ಧಕ್ಕೆ ಹೋಗದಿದ್ದವರು ಕೂಡ ಬರಲಾರಂಭಿಸಿದರು. ಈ ಜನರು ಸುಮಾರು ಎಂಭತ್ತು ಮಂದಿ ಇದ್ದರು ಎಂದು ಚರಿತ್ರೆಗಾರರು ಹೇಳುತ್ತಾರೆ. ಆದರೆ ಅದಕ್ಕಿಂತ ಹೆಚ್ಚಿನ ಜನರಿದ್ದರು ಎಂದು ಕೆಲವು ವರದಿಗಳಿಂದ ತಿಳಿದುಬರುತ್ತದೆ. ಅಂಥವರ ಬಾಹ್ಯ ನೆಪಗಳನ್ನು ಹಝ್ರತ್ ಪೈಗಂಬರ್(ಸ) ಒಪ್ಪಿಕೊಂಡು ಅವರಿಂದ ನಿಷ್ಠೆಯ ಪ್ರತಿಜ್ಞೆಯನ್ನು ಪಡೆದುಕೊಂಡು ಅವರಿಗಾಗಿ ಕ್ಷಮೆಯ ಪ್ರಾರ್ಥನೆ ಮಾಡಿದರು. ಅವರ ಅಂತರಂಗದ ಸಂಗತಿಯನ್ನು ಅಲ್ಲಾಹನಿಗೆ ಬಿಟ್ಟರು.

ಆದರೆ ಈ ಕಪಟವಿಶ್ವಾಸಿಗಳ ಈ ಅಪರಾಧವು ಕ್ಷಮಿಸಲಾಗದ್ದು ಆಗಿತ್ತು. ಆದ್ದರಿಂದ ಅಲ್ಲಾಹನು ಅವರ ಬಗ್ಗೆ ಹಝ್ರತ್ ಪೈಗಂಬರ್(ಸ)ರಿಗೆ ದಿವ್ಯವಾಣಿಯ ಮೂಲಕ ತಿಳಿಸಿದನು. ಅವರು ಎಷ್ಟು ಕೊಳಕು ಜನರು ಎಂದರೆ, ಅಲ್ಲಾಹನು ಇನ್ನು ಮುಂದೆ ಅವರ ಮೇಲೆ ಎಂದಿಗೂ ಸಂತುಷ್ಟನಾಗಲಾರನು ಎಂದು ಅಲ್ಲಾಹನು ಹೇಳಿದ್ದನು. ಅಲ್ಲಾಹನು ಈ ಜನರ ಕುರಿತು ಸೂರಃ ತೌಬದಲ್ಲಿ ತಿಳಿಸಿಕೊಟ್ಟನು. ತಬೂಕ್ ಯುದ್ಧದಿಂದ ಹಿಂದೆ ಉಳಿದ ಈ ಜನರ ಕುರಿತು ಅಲ್ಲಾಹನು ತನ್ನ ತೀವ್ರ ಅಸಂತುಷ್ಟಿಯನ್ನು ವ್ಯಕ್ತಪಡಿಸಿದನು, ಈ ಜನರನ್ನು ಅಧರ್ಮಿಗಳು ಎಂದು ಘೋಷಿಸಿದನು, ಇವರಿಗಾಗಿ ಜನಾಝ ನಮಾಝ್ ನಿರ್ವಹಿಸುವುದನ್ನು ಮತ್ತು ಇವರ ಸಮಾಧಿಯ ಮುಂದೆ ನಿಂತು ದುಆ ಮಾಡುವುದನ್ನು ಅಲ್ಲಾಹನು ನಿಷೇಧಿಸಿದನು. ಮಾತ್ರವಲ್ಲ, ಇನ್ನು ಮುಂದೆ ಇವರು ಯಾವುದೇ ಯೋಜನೆಯಲ್ಲಿ ಭಾಗವಹಿಸುವುದರಿಂದ ಮತ್ತು ಯಾವುದೇ ಯುದ್ಧದಲ್ಲಿ ಪಾಲ್ಗೊಳ್ಳುವುದರಿಂದ ತಡೆಯಲಾಯಿತು.

(ಹುಝೂರ್ ಹೇಳಿದರು:) ನಾಲ್ಕು ವಿಧದ ಜನರು ತಬೂಕ್ ಯುದ್ಧದಿಂದ ಹಿಂದೆ ಉಳಿದಿದ್ದರು. ಒಂದು ರಸೂಲುಲ್ಲಾಹ್(ಸ)ರ ಆದೇಶದ ಮೇರೆಗೆ ಯಾವುದಾದರೂ ಕರ್ತವ್ಯವನ್ನು ನಿರ್ವಹಿಸಲಿಕ್ಕಾಗಿ ಹಿಂದೆ ಉಳಿದ ಅದೃಷ್ಟವಂತರು. ಉದಾಹರಣೆಗೆ: ಹಝ್ರತ್ ಅಲಿ(ರ), ಇಬ್ನು ಉಮ್ಮು ಮಕ್ತೂಮ್(ರ) ಮತ್ತು ಮುಹಮ್ಮದ್ ಬಿನ್ ಮಸ್ಲಮ(ರ) ಮುಂತಾದವರು.

ಎರಡನೆಯದಾಗಿ, ನಿಸ್ಸಹಾಯಕರು, ರೋಗಿಗಳು, ದುರ್ಬಲರು ಅಥವಾ ಕಡುಬಡವರಾಗಿದ್ದವರು. ಅವರ ಬಳಿ ಯಾತ್ರೆಗೆ ಬೇಕಾಗಿರುವ ಸವಾರಿಮೃಗಗಳು ಇದ್ದಿರಲಿಲ್ಲ. ಅವರು ಪ್ರತಿ ಹೆಜ್ಜೆಯಲ್ಲೂ ನಮ್ಮೊಂದಿಗಿದ್ದರು ಎಂದು ಅವರ ಬಗ್ಗೆ ಹಝ್ರತ್ ಪೈಗಂಬರ್(ಸ) ಹೇಳಿದ್ದರು.

ಮೂರನೆಯದಾಗಿ, ಕಪಟವಿಶ್ವಾಸಿಗಳು – ಇವರ ವರ್ತನೆಯನ್ನು ತೀವ್ರವಾಗಿ ಖಂಡಿಸಲಾಯಿತು ಮತ್ತು ಪವಿತ್ರ ಖುರ್‌ಆನಿನಲ್ಲಿ ಅವರ ಮೇಲೆ ಅಲ್ಲಾಹನ ಶಾಶ್ವತವಾದ ಕೋಪ ಮತ್ತು ಕಠಿಣ ಶಿಕ್ಷೆ ಇದೆ ಎಂಬ ಆದೇಶ ಅವತೀರ್ಣವಾಯಿತು.

ನಾಲ್ಕನೆಯದಾಗಿ, ಆಲಸ್ಯ ಮತ್ತು ಸುಸ್ತಿಯ ಕಾರಣದಿಂದ ಹಿಂದೆ ಉಳಿದವರು. ಇವರಲ್ಲಿ ಮೂವರು ಸಹಾಬಿಯರು ವಿಶೇಷವಾಗಿ ಉಲ್ಲೇಖನೀಯರು, ಅವರು: ಹಝ್ರತ್ ಕಅಬ್ ಬಿನ್ ಮಾಲಿಕ್(ರ), ಹಝ್ರತ್ ಮುರಾರ ಬಿನ್ ರಬೀಅ್(ರ)

ಮತ್ತು ಹಝ್ರತ್ ಹಿಲಾಲ್ ಬಿನ್ ಉಮಯ್ಯ(ರ). ಈ ಮೂವರು ಸಹಾಬಿಯರ ಬಗ್ಗೆ ಪವಿತ್ರ ಖುರ್‌ಆನಿನ ಆಯತ್ ಕೂಡ ಅವತೀರ್ಣವಾಯಿತು. **'ಅಲಸ್ಸಲಾಸತಿಲ್ಲದೀನ ಖುಲ್ಲಿಫೂ'** ಅಂದರೆ, ಹಿಂದೆ ಉಳಿದುಬಿಟ್ಟಿದ್ದ ಆ ಮೂವರು. ಇವರ ಘಟನೆಯ ವಿವರಣೆ ಈ ರೀತಿಯಾಗಿದೆ: ಬುಖಾರಿಯ ಒಂದು ವರದಿಯಲ್ಲಿ ಹಝ್ರತ್ ಕಅಬ್ ಬಿನ್ ಮಾಲಿಕ್(ರ) ಸ್ವತಃ ಈ ಇಡೀ ಘಟನೆಯನ್ನು ವಿವರಿಸಿದ್ದಾರೆ. ಅವರು ಹೇಳುತ್ತಾರೆ, ಹಝ್ರತ್ ಪೈಗಂಬರ್(ಸ) ಪ್ರಯಾಣದ ತಯಾರಿ ಆರಂಭಿಸಿದರು ಮತ್ತು ಅವರೊಂದಿಗೆ ಮುಸ್ಲಿಮರು ಸಹ ತಯಾರಿ ಆರಂಭಿಸಿದರು. ನಾನು ಕೂಡ ಹೋಗಲು ದೃಢವಾದ ತೀರ್ಮಾನ ಮಾಡಿದ್ದೆ. ಆದರೆ ಸುಸ್ತಿಯ ಕಾರಣ ತಯಾರಿ ಆಗುತ್ತಿರಲಿಲ್ಲ. ನಾನು ನಾಳೆ ನಾಳಿದ್ದು ಎಂದು ಯೋಚಿಸುತ್ತಲೇ ಇದ್ದೆ. ಅಷ್ಟರಲ್ಲಿ ರಸೂಲುಲ್ಲಾಹ್(ಸ) ಒಂದು ಬೆಳಿಗ್ಗೆ ಹೊರಟು ಹೋದರು. ನನ್ನ ಪ್ರಯಾಣದ ಸಿದ್ಧತೆಗಳಲ್ಲಿ ನಾನು ಏನನ್ನೂ ಮುಗಿಸಿರಲಿಲ್ಲ. ಹಝ್ರತ್ ಪೈಗಂಬರ್(ಸ) ಹೋದ ಒಂದೆರಡು ದಿನಗಳಲ್ಲಿ ನಾನು ತಯಾರಿ ಮಾಡಿಕೊಂಡು ಸೇನೆಯನ್ನು ಸೇರಿಕೊಳ್ಳುತ್ತೇನೆ ಎಂದು ನಾನು ಅಂದುಕೊಂಡೆ. ಇದೇ ಪರಿಸ್ಥಿತಿ ಮುಂದುವರೆಯಿತು, ಅಷ್ಟರಲ್ಲಿ ವೇಗವಾಗಿ ಪ್ರಯಾಣ ಮಾಡುತ್ತಾ ಮುಸ್ಲಿಮರ ಸೇನೆ ಬಹಳ ಮುಂದಕ್ಕೆ ಹೋಗಿಬಿಟ್ಟಿತು. ರಸೂಲುಲ್ಲಾಹ್(ಸ) ಮದೀನದಿಂದ ಹೊರಟುಹೋದ ನಂತರ ನಾನು ಜನರ ನಡುವೆ ಹೊರಗೆ ಹೋಗಿ ಸುತ್ತಾಡುವಾಗಲೆಲ್ಲ ಕಾಪಟ್ಯ ಹೊಂದಿರುವ ವ್ಯಕ್ತಿಗಳು ಅಥವಾ ದುರ್ಬಲ ವ್ಯಕ್ತಿಗಳನ್ನು ಮಾತ್ರ ಕಾಣುತ್ತಿದ್ದೆ, ಇದು ನನ್ನನ್ನು ದುಃಖಿಸಿತು.

ನಂತರ ಹಝ್ರತ್ ಪೈಗಂಬರ್(ಸ) ಹಿಂದಿರುಗುತ್ತಿದ್ದಾರೆ ಎಂಬ ಸುದ್ದಿ ನನಗೆ ತಲುಪಿದಾಗ, ನನಗೆ ಚಿಂತೆ ಶುರುವಾಯಿತು. ಹಝ್ರತ್ ಪೈಗಂಬರ್(ಸ)ರ ಅಸಂತುಷ್ಟಿಯಿಂದ ನಾಳೆ ನಾನು ಹೇಗೆ ಪಾರಾಗಲಿ ಎಂಬುದರ ಬಗ್ಗೆ ನಾನು ಸುಳ್ಳು ನೆಪಗಳನ್ನು ಯೋಚಿಸಲು ತೊಡಗಿದೆ.

ರಸೂಲುಲ್ಲಾಹ್(ಸ) ತಲುಪಿದ್ದಾರೆ ಎಂದು ಹೇಳಲಾದಾಗ, ನನ್ನ ಹೃದಯದಿಂದ ಎಲ್ಲ ಸುಳ್ಳು ವಿಚಾರಗಳು ಮಾಯವಾದವು. ಸುಳ್ಳು ಮಾತುಗಳಿಂದ ನಾನು ಎಂದಿಗೂ ಹಝ್ರತ್ ಪೈಗಂಬರ್(ಸ)ರ ಕೋಪದಿಂದ ಪಾರಾಗಲು ಸಾಧ್ಯವಲ್ಲ ಎಂದು ನನಗೆ ಮನದಟ್ಟಾಯಿತು. ಆದ್ದರಿಂದ, ನಾನು ಹಝ್ರತ್ ಪೈಗಂಬರ್(ಸ)ರೊಡನೆ ಸತ್ಯವನ್ನೇ ಹೇಳಲು ನಿರ್ಧರಿಸಿದೆ.

ರಸೂಲುಲ್ಲಾಹ್(ಸ) ಬಂದಾಗ, ಹಿಂದೆ ಉಳಿದ ಜನರು ಅವರ ಬಳಿಗೆ ಬಂದರು ಮತ್ತು ನೆಪ ಹೇಳಲು, ಪ್ರಮಾಣ ಮಾಡಲು ಆರಂಭಿಸಿದರು. ಇಂತಹ ಜನರು ಎಂಭತ್ತಕ್ಕಿಂತ ಹೆಚ್ಚಿದ್ದರು. ರಸೂಲುಲ್ಲಾಹ್(ಸ) ಈ ಜನರ ಬಾಹ್ಯ ನೆಪಗಳನ್ನು ಒಪ್ಪಿಕೊಂಡು ಅವರಿಂದ ಬೈಅತ್ ಪಡೆದುಕೊಂಡರು. ನಂತರ ನಾನು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದೆ. ನಾನು ಹಝ್ರತ್ ಪೈಗಂಬರ್(ಸ)ರಿಗೆ ಸಲಾಮ್ ಹೇಳಿದಾಗ, ಅವರು ಬೇಸರಗೊಂಡ ವ್ಯಕ್ತಿಯಂತೆ ಮಂದಹಾಸ ಬೀರಿದರು. ಹಝ್ರತ್ ಪೈಗಂಬರ್(ಸ) ಕೇಳಿದರು: 'ನಿನ್ನನ್ನು ಹಿಂದೆ ಇರಿಸಿದ ವಿಷಯ ಯಾವುದು? ನೀನು ಸವಾರಿಮೃಗವನ್ನು ಖರೀದಿಸಿರಲಿಲ್ಲವೇ?' ನಾನು ಹೇಳಿದೆ, 'ಅಲ್ಲಾಹನಾಣೆ, ನಾನು ನಿಮ್ಮ ಹೊರತಾಗಿ ಈ ಲೋಕದ ಜನರಲ್ಲಿ ಬೇರೆ ಯಾರೊಂದಿಗಾದರೂ ಕುಳಿತಿದ್ದರೆ, ನಾನು ನೆಪ ಹೇಳಿ ಖಂಡಿತವಾಗಿಯೂ ಅವರ ಕೋಪದಿಂದ ಪಾರಾಗುತ್ತಿದ್ದೆ ಎಂದು ನಾನು ಭಾವಿಸುತ್ತೇನೆ. ನನಗೆ ಚೆನ್ನಾಗಿ ಮಾತನಾಡಲು ಗೊತ್ತು. ಆದರೆ ಅಲ್ಲಾಹನಾಣೆ, ನಾನು ಇಂದು ನಿಮ್ಮೊಡನೆ ಯಾವುದಾದರೂ ಸುಳ್ಳು ಹೇಳಿದರೆ, ನೀವು ನನ್ನ ಬಗ್ಗೆ ಸಂತೃಪ್ತರಾಗುವಿರಿ. ಆದರೆ ಅಲ್ಲಾಹನು ಶೀಘ್ರದಲ್ಲೇ ನಿಮ್ಮನ್ನು ನನ್ನ ಕುರಿತು ಕೋಪಗೊಳ್ಳುವಂತೆ ಮಾಡುವನು. ಆದರೆ ಒಂದು ವೇಳೆ ನಾನು ನಿಮ್ಮೊಡನೆ ಸತ್ಯವನ್ನು ಹೇಳಿದರೆ, ಅದರಿಂದ ನೀವು ನನ್ನ ಮೇಲೆ ಅಸಂತುಷ್ಟರಾದರೂ ಕೂಡ, ಅಲ್ಲಾಹನು ನನ್ನನ್ನು ಕ್ಷಮಿಸುವನು ಎಂಬ ಭರವಸೆಯನ್ನು ನಾನು ಹೊಂದಿದ್ದೇನೆ.

'ಅಲ್ಲಾಹನಾಣೆ, ನನಗೆ ಯಾವುದೇ ನೆಪವಿರಲಿಲ್ಲ. ಅಲ್ಲಾಹನಾಣೆ, ನಾನು ನಿಮ್ಮಿಂದ ಹಿಂದೆ ಉಳಿದ ಆ ಸಮಯದಲ್ಲಿ ಇದ್ದಷ್ಟು ಆರೋಗ್ಯವಂತನಾಗಿ ಎಂದೂ ಇರಲಿಲ್ಲ.' ಇದನ್ನು ಕೇಳಿ ರಸೂಲುಲ್ಲಾಹ್(ಸ) ಹೇಳಿದರು: 'ನೀನು ಸತ್ಯವನ್ನು ಹೇಳಿರುವೆ. ಎದ್ದೇಳು, ಹೋಗು, ಅಲ್ಲಾಹನು ನಿನ್ನ ಬಗ್ಗೆ ಯಾವುದಾರೂ ತೀರ್ಪು ನೀಡುವ ತನಕ ಕಾಯುತ್ತಿರು.' ನಾನಲ್ಲದೇ ಮುರಾರ ಬಿನ್ ರಬೀಅ್ ಉಮರಿ(ರ) ಮತ್ತು ಹಿಲಾಲ್ ಬಿನ್ ಉಮಯ್ಯ(ರ) ಕೂಡ ನಾನು ಹೇಳಿದ್ದನ್ನೇ ಹೇಳಿದರು ಮತ್ತು ಅವರಿಗೂ ನನಗೆ ಸಿಕ್ಕ ಉತ್ತರವೇ ಸಿಕ್ಕಿತು.

ಇದೇ ವೇಳೆ, ಘಸ್ಸಾನ್‌ನ ಅರಸನ ಕಡೆಯಿಂದ ನನಗೆ ಒಂದು ಪತ್ರ ಬಂದಿತು. ಅದರಲ್ಲಿ ಹೀಗೆ ಬರೆಯಲಾಗಿತ್ತು: 'ನಿಮ್ಮ ಸಹಚರರು ನಿಮ್ಮೊಂದಿಗೆ ಕಠಿಣವಾಗಿ ನಡೆದುಕೊಂಡು ನಿಮ್ಮನ್ನು ಒಬ್ಬಂಟಿಯಾಗಿ ಬಿಟ್ಟಿದ್ದಾರೆ ಎಂದು ನನಗೆ ಸುದ್ದಿ ತಲುಪಿದೆ. ನಿಮಗೆ ಅವಮಾನವಾಗುವ ಮತ್ತು ನಿಮ್ಮನ್ನು ವ್ಯರ್ಥಗೊಳಿಸುವ ಗೃಹದಲ್ಲಿ ದೇವನು ನಿಮ್ಮನ್ನು ಹುಟ್ಟಿಸಿಲ್ಲ. ನೀವು ನಮ್ಮ ಬಳಿಗೆ ಬನ್ನಿ, ನಾವು ನಿಮ್ಮನ್ನು ಆದರಿಸುತ್ತೇವೆ.' ನಾನು ಈ ಪತ್ರ ಓದಿದಾಗ, 'ಈ ಪತ್ರ ಮತ್ತೊಂದು ಸತ್ವಪರೀಕ್ಷೆಯಾಗಿದೆ' ಎಂದು ನಾನು ಹೇಳಿದೆ. ನಾನು ಆ ಪತ್ರವನ್ನು ತೆಗೆದುಕೊಂಡು ಒಲೆಯ ಕಡೆಗೆ ಹೋಗಿ ಅದಕ್ಕೆ ಎಸೆದೆ.

ಐವತ್ತು ರಾತ್ರಿಗಳಲ್ಲಿ ನಲವತ್ತು ರಾತ್ರಿಗಳು ಕಳೆದು ಹೋದಾಗ, ರಸೂಲುಲ್ಲಾಹ್(ಸ)ರ ದೂತರು ನನ್ನ ಬಳಿಗೆ ಬಂದು ಹೀಗೆ ಹೇಳಿದರು: ನೀವು ನಿಮ್ಮ ಪತ್ನಿಯಿಂದ ದೂರವಿರಲು ಹಝ್ರತ್ ಪೈಗಂಬರ್(ಸ) ಹೇಳುತ್ತಿದ್ದಾರೆ.' 'ನಾನು ಅವಳಿಗೆ ತಲಾಖ್ ನೀಡಬೇಕೇ' ಎಂದು ನಾನು ಕೇಳಿದೆ. ದೂತ ಹೇಳಿದ: 'ಅವಳಿಂದ ದೂರವಿರಿ ಮತ್ತು ಅವಳ ಹತ್ತಿರ ಹೋಗಬೇಡಿ'. ಇದೇ ಸಂದೇಶವನ್ನು ಇತರ ಇಬ್ಬರೂ ಸಹಾಬಿಯರಿಗೂ ಹಝ್ರತ್ ಪೈಗಂಬರ್(ಸ) ತಲುಪಿಸಿದರು.

ಐವತ್ತನೇ ರಾತ್ರಿಯ ಬೆಳಿಗ್ಗೆ ಫಜ್ರ್ ನಮಾಝ್ ಸಲ್ಲಿಸಿದ ನಂತರ, ನಾನು ನನ್ನ ಮನೆಯ ಮೇಲ್ಛಾವಣಿಗಳಲ್ಲಿ ಒಂದರ ಮೇಲೆ ಕುಳಿತಿದ್ದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಪ್ರಸ್ತಾಪಿಸಿದ ಸ್ಥಿತಿಯಲ್ಲೇ ನಾನು ಕುಳಿತಿದ್ದೆ, ಅಂದರೆ, ನನ್ನ ಮೇಲೆ ನನ್ನ ಜೀವವೇ ಸಂಕೋಚಿತಗೊಂಡಂತೆ ಇತ್ತು ಹಾಗೂ ಭೂಮಿಯು ವಿಸ್ತಾರವಾಗಿದ್ದರೂ ನನ್ನ ಮೇಲೆ ಇಕ್ಕಟ್ಟಾಗಿದ್ದಂತೆ ಇತ್ತು. ಅದೇ ವೇಳೆ ನಾನು ಒಬ್ಬ ಕರೆಯುವವನು ಹೀಗೆ ಹೇಳುವುದನ್ನು ಕೇಳಿದೆ 'ಎಲೈ ಕಅಬ್ ಬಿನ್ ಮಾಲಿಕ್, ನಿಮಗೆ ಶುಭ ಸಮಾಚಾರ,' ಇದನ್ನು ಆಲಿಸಿ ನಾನು ಸುಜೂದ್ ಮಾಡುತ್ತಾ ಬಿದ್ದುಬಿಟ್ಟೆ ಮತ್ತು ಸಂಕಟವು ದೂರವಾಯಿತು ಎಂದು ನನಗೆ ಗೊತ್ತಾಯಿತು. ಇದನ್ನು ಕೇಳಿ ಎಲ್ಲರೂ ನಮಗೆ ಶುಭಾಶಯ ಅರ್ಪಿಸಲು ಆರಂಭಿಸಿದರು.

ನಾನು ಮಸೀದಿಯನ್ನು ತಲುಪಿ ಹಝ್ರತ್ ಪೈಗಂಬರ್(ಸ)ರಿಗೆ **ಅಸ್ಸಲಾಮು ಅಲೈಕುಮ್** ಎಂದು ಹೇಳಿದಾಗ, ಅವರ ಮುಖವು ಸಂತೋಷದಿಂದ ಹೊಳೆಯುತ್ತಿತ್ತು ಮತ್ತು ಅವರು ಹೀಗೆ ಹೇಳಿದರು: 'ನಿಮಗೆ ಸುವಾರ್ತೆ, ನಿಮ್ಮ ತಾಯಿ ನಿಮಗೆ ಜನ್ಮ ನೀಡಿದ ನಂತರ ನೀವು ಕಳೆದ ದಿನಗಳಲ್ಲಿ ಅತ್ಯಂತ ಸಂತೋಷದ ದಿನವು ಇದಾಗಿದೆ.' ನಾನು ಕೇಳಿದೆ: 'ಯಾ ರಸೂಲುಲ್ಲಾಹ್, ಇದು ನಿಮ್ಮ ಕಡೆಯಿಂದ ಇರುವ ಶುಭ ಸಮಾಚಾರವೇ ಅಥವಾ ಇದು ಅಲ್ಲಾಹನ ಕಡೆಯಿಂದಲೇ?' ಹಝ್ರತ್ ಪೈಗಂಬರ್(ಸ) ಹೇಳಿದರು: 'ನನ್ನ ಕಡೆಯಿಂದಲ್ಲ, ಇದು ಅಲ್ಲಾಹನ ಕಡೆಯಿಂದಲೇ.'

ಇದರ ಉಳಿದ ಭಾಗವನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ತಮ್ಮದೇ ಶೈಲಿಯಲ್ಲಿ ವಿವರಿಸಿದ್ದಾರೆ, ಅದನ್ನು ಇನ್‌ಶಾ ಅಲ್ಲಾಹ್ ಮುಂದಿನ ಬಾರಿ ವಿವರಿಸುತ್ತೇನೆ.

ಖುತ್ಬದ ಕೊನೆಯಲ್ಲಿ ಹುಝೂರ್ ಮೂವರು ದಿವಂಗತರ ಬಗ್ಗೆ ಪ್ರಸ್ತಾಪಿಸಿ ಅವರ ಮಗ್‌ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ದುಆ ಮಾಡಿದರು.

————————————*****————————————

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَاهَادِيَ لَهٗ ـ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*

At, ***'Masjid Mubarak',*** *Islamabad, Tilford,* U.K. On 28-11-2025

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim | ***Layout:*** Basheer K.P. Manjeshwar

***Published By:*** Kannada Isha'at Team for Nazarath Nashr-O-Isha'ath, Qadian

***Email*****:** *khutuba.kannada@gmail.com*

**You can find all the Sermons archived at**: www.alislam.org/friday-sermon